ಶೀರ್ಷಿಕೆ : **ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆ** (ಏನ.ಪಿ.ಇ.ಪಿ)
2023-24 ನೇ ಸಾಲಿನ ಕಾರ್ಯಕ್ರಮದ ವರದಿ.

| ಕ್ರ.ಸಂ | ವಿವರ |
|---|---|
| 1 | **ಕಾಯಕ್ರಮದ ಹಿನ್ನೆಲೆ :**<br>ಯುನೆಸ್ಕೋ ಪ್ರಕಾರ "**ಜನಸಂಖ್ಯಾ ಶಿಕ್ಷಣವು ಜನಸಂಖ್ಯೆಯ ಪರಿಸ್ಥಿತಿ,ಕುಟುಂಬ ,ಸಮುದಾಯ ಮತ್ತು ಜಗತ್ತಿನ ಅಧ್ಯಯನವನ್ನು ಒದಗಿಸುವ ಒಂದು ಶೈಕ್ಷಣಿಕ ಕಾರ್ಯಕ್ರಮವಾಗಿದೆ**'.<br>ಈ ಶೈಕ್ಷಣಿಕ ಅಧ್ಯಯನದ ಮಹತ್ವದ ಬಗ್ಗೆ 1969 ರಲ್ಲಿ ಈ ವಿಚಾರವಾಗಿ ಅಲೋಚಿಸಲಾಯಿತು. ಅದರ ಪರಿಣಾಮವಾಗಿ,1969 ರಲ್ಲಿ "ನ್ಯಾಷನಲ್ ಸೆಮಿನಾರ್ ಆನ್ ಪಾಪುಲೇಷನ್ ಎಜುಕೇಷನ್ 'ಕಾರ್ಯಗಾರ ಮುಂಬೈನಲ್ಲಿ ನಡೆದಾಗ ಇದರ ಕಲ್ಪನೆಯನ್ನು ಮತ್ತು ಅಗತ್ಯದ ಬಗ್ಗೆ ಸ್ಪಷ್ಟೀಕರಿಸಲಾಯಿತು ಆಗಾಗಿ 1970 ರಲ್ಲಿ "ಪಾಪುಲೇಷನ್ ಎಜುಕೇಷನ್ ಯೂನಿಟ್" ನ್ನು ಸ್ಥಾಪಿಸಲಾಗಿತ್ತು. 1981 ರಲ್ಲಿ ಔಪಚಾರಿಕವಾಗಿ ಇದನ್ನು ಜಾರಿಗೆ ತರಲಾಯಿತು. 1986 ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಶಾಲಾ ಕಾಲೇಜುಗಳಲ್ಲಿ ಇದನ್ನು ಪರಿಚಯಿಲಾಯಿತು. |
| 2 | **ಉದ್ದೇಶಗಳು** :<br>▶ ವಿದ್ಯಾರ್ಥಿಗಳಲ್ಲಿ ತರ್ಕಬದ್ದ ಮತ್ತು ಜವಾಬ್ದಾರಿಯುತ ವರ್ತನೆಗಳನ್ನು ಅಭಿವೃದ್ದಿ ಪಡಿಸುವ ಉದ್ದೇಶದಿಂದ ರೂಪಿಸಲಾಗಿದ<br>▶ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ವಿದ್ಯಾರ್ಥಿಗಳು ತಮ್ಮನ್ನು ಹೇಗೆ ಬದಲಾಯಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳುವ ಮೂಲಕ ಸಮಾಜಕ್ಕೂ ಅರಿವು ನೀಡಲು ಪ್ರೇರೇಪಿಸುತ್ತಿದೆ.<br>▶ ನಿತ್ಯ ಜೀವನದಲ್ಲಿ ಮೌಲ್ಯ ಹಾಗೂ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಪ್ರೇರಣೆ ನೀಡುವುದು. |
| 3 | **ಜಿಲ್ಲೆಯಲ್ಲಿ ಕಾರ್ಯಕ್ರಮದ ರೂಪುರೇಷೆ :**<br>ಸದರಿ ಕಾರ್ಯಕ್ರಮದ ಸ್ಪರ್ಧೆಗಳನ್ನು 8 ನೇ 9ನೇ ,10 ನೇ ತರಗತಿ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಏರ್ಪಡಿಸಲಾಗುತ್ತದೆ. ಪಾತ್ರಭಿನಯವು ಹಿಂದಿ ಅಥವಾ ಇಂಗ್ಲೀಷ್ ನಲ್ಲಿ ಪ್ರಸ್ತುತಪಡಿಸಬೇಕಾಗಿರುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ಜಾನಪದ ನೃತ್ಯಕ್ಕೆ 6 ವಿದ್ಯಾರ್ಥಿಗಳು ಪಾತ್ರಾಭಿನಯದಲ್ಲಿ 5 ರಿಂದ 6 ವಿದ್ಯಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿದೆ. ಶಾಲಾಹಂತ, ತಾಲ್ಲೂಕುಹಂತ ಜಿಲ್ಲಾಹಂತ, ರಾಜ್ಯಹಂತ ಹಾಗೂ ರಾಷ್ಟ್ರಹಂತ ದಲ್ಲಿ ಈ ಸ್ಪರ್ಧೆಗಳು ನಡೆಯುತ್ತವೆ ಎಂಬ ಮಾಹಿತಿಯನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ ಮಾಹಿತಿ ನೀಡಲಾಗಿದೆ. ತಾಲ್ಲೂಕುಹಂತದಲ್ಲಿ ಪ್ರಥಮಸ್ಥಾನದಲ್ಲಿ ವಿಜೇತರಾದ ತಂಡಗಳು 2023-24 ನೇ ಸಾಲಿನಲ್ಲಿ ಜಿಲ್ಲಾಮಟ್ಟದಲ್ಲಿ ಡಿ.ಎಸ್.ಇ.ಆರ್.ಟಿ ಬೆಂಗಳೂರುರವರ ಸೂಚನೆಯಂತೆ ಎನ್.ಪಿ.ಇ.ಪಿ ಕಾರ್ಯಕ್ರಮದಡಿ ಜಾನಪದ ನೃತ್ಯ ಮತ್ತು ಪಾತ್ರಾಭಿನಯ ಸ್ಪರ್ಧೆಗಳಲ್ಲಿ ಭಾಗವಹಿಸಲು ಸೂಚಿಸಿ.ಅದರಂತೆ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಳ್ಳಲಾಗಿತ್ತು.ಇದಕ್ಕೆ ಇಲಾಖೆ ಸೂಚಿಸಿದ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ತಿಳಿಸಲಾಗಿತ್ತು ಅವುಗಳೆಂದರೆ,<br>▶ **Folk Dance (Themes)**<br>1. Equal Opportunity for Boys and Girls.<br>2. Role of Joint Family In Child's Development.<br>3. Protection of Environment ( Refuse, Reduce Reuse and Recycle)<br>4. Prevention of Substance Abuse<br>5. Healthy Relationships during Adolescence<br>▶ **Role Play ( Themes)**<br>1. Growing up Healthy.<br>2. Nutritious Food and well-being.<br>3. Personal Safty ( Physical, Mental, Emotional and Sexual)<br>4. Safe use of Internet, Gadgets and Media Literacy<br>5. Substance Abuse and Its Causes and Prevention |

| | |
|---|---|
| | ಸದರಿ ವರ್ಷ 4 ತಾಲ್ಲೂಕಿನ ದೇವನಹಳ್ಳಿಯ 14 ವಿದ್ಯಾರ್ಥಿಗಳು, ದೊಡ್ಡಬಳ್ಳಾಪುರದ 12ವಿದ್ಯಾರ್ಥಿಗಳು, ಹೊಸಕೋಟೆಯ 12ವಿದ್ಯಾರ್ಥಿಗಳು ಹಾಗೂ ನೆಲಮಂಗಲ ತಾಲ್ಲೂಕಿನ 10 ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿರುತ್ತಾರೆ. ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರ ವಿತರಿಸಲಾಯಿತು. ನಗದು ಬಹುಮಾನ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.<br><br><br><br><br> |
| 4 | ಆಶಯಗಳು :<br>▶ ಮಕ್ಕಳಲ್ಲಿ ಆರೋಗ್ಯಕರ ಹವ್ಯಾಸಗಳನ್ನು ಬೆಳೆಸುವಲ್ಲಿ ಸಹಕಾರಿಯಾಗುವುದು.<br>▶ ಮಕ್ಕಳ ಮುಖಾಂತರ ಕುಟುಂಬ,ಸಮುದಾಯದಲ್ಲೂ ಸಮಾಜ ಘಾತುಕ ಅಂಶಗಳ ಅರಿವು ನೀಡಿ,ಅಂತಹ ನಡವಳಿಕೆಗಳಿಂದ ದೂರವಿರುವಂತೆ ಮಕ್ಕಳು ನಿರ್ಧರಿಸುವರು.<br>▶ ಸಮುದಾಯದ ಯುವಜನಾಂಗದಲ್ಲಿ ಮದ್ಯವ್ಯಸನ,ಧೂಮಪಾನ,ಮಾದಕ ವಸ್ತುಗಳ ಸೇವನೆ ಇತರೇ ಸಮಾಜಘಾತುಕ ಹವ್ಯಾಸಗಳಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ತಿಳಿಸಿ,ಅದರಿಂದ ದೂರವಿರುವ ದೃಢನಿರ್ಧಾರವನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು.<br>▶ ಜೀವನದಲ್ಲಿನ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಮನೋಧೈರ್ಯ ಬೆಳೆಸುವುದು. |